**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -694/2024**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | **ಶಿವಕುಮಾರ್** |
| ತಂದೆಯ ಹೆಸರು | **ರಮೇಶ್** |
| ವಯಸ್ಸು | **26** |
| ಉದ್ಯೋಗ | **ವಿದ್ಯಾರ್ಥಿ** |
| ವಿಳಾಸ | **ಸುಂಕದ ಕಟ್ಟೆ** |

ದಿನಾಂಕಃ **30-01-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-2 ರವರು ನನ್ನ ಮಾವ. ಚಾಸಾ-3 ರವರು ನನ್ನ ಅಕ್ಕ. ಶ್ರೇಯಸ್ ಗೋಕುಲ್ ರವರು ಚಾಸಾ-3 ರವರ ಮಗ. ದಿ.25-12-2023 ರಂದು ಮಧ್ಯಾಹ್ನ ದ ಸಮಯದಲ್ಲಿ ನಾನು, ಚಾಸಾ-2 ಮತ್ತು 3 ರವರು ಸೊಂಡೆಕೊಪ್ಪಕ್ಕೆ ಹೋಗಿದ್ದೇವು. ಅಲ್ಲಿ ಕೆಲಸವನ್ನು ಮುಗಿಸಿಕೊಂಡು ನನ್ನನ್ನು ನನ್ನ ಮನೆಗೆ ಬಿಡಲು ಚಾಸಾ-2 ರವರು ಸ್ಯಾಂಟ್ರೋ ಕಾರನ್ನು ಚಾಲನೆ ಮಾಡುತ್ತಿದ್ದರು ಮತುತ ನಾವು ಬರುತ್ತಿದ್ದಾಗ ಹೊನ್ನಗನಹಟ್ಟಿಯ ಬಳಿ ಎದುರುಗಡೆಯಿಂದ ಬರುತ್ತಿದ್ದ ಹೊಂಡಾ ಸಿಟಿ ಕಾರ್ ಅತಿವೇಗದಿಂದ ಬಂದು ಡಿವೈಡರ್ ಗೆ ಡಿಕ್ಕಿಪಡಿಸಿ ನಂತರ ನಮ್ಮ ಕಾರಿಗೆ ಡಿಕ್ಕಿಪಡಿಸಿದರು. ಸದರಿ ಅಪಘಾತದಿಂದ ಚಾಸಾ-2 ರವರ ತೊಡೆಗೆ ಮತ್ತು ಸೊಂಟಕ್ಕೆ ತೀವ್ರ ಸ್ವರೂಪದ ಗಾಯಗಳು ಆಗಿತ್ತು. ನನ್ನ ಮೂಗು ಮತ್ತು ಕಾಲಿಗೆ ಗಾಯ ಆಗಿತ್ತು. ಚಾಸಾ-3 ಮತು ಅವರ ಮಗನಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ.

ನಂತರ ನಾನು ನನ್ನ ಸ್ನೇಹಿತರಿಗೆ ಕರೆ ಮಾಡಿ ಚಾಸಾ-2 ರವರನ್ನು ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಸೇರಿಸಿದೆನು. ಮಾರನೇ ದಿನ ನಾನು ತಾವರೆಕೆರೆ

ಪೋ. ಠಾಣೆಗೆ ದೂರನ್ನು ನೀಡಿದೆನು. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮಾರನೇ ದಿನ ಪೋಲಿಸರು ಅಪಘಾತ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಎರಡು ಕಾರುಗಳನ್ನು ವಶಪಡಿಸಿಕೊಂಡು ಫೋಟೋವನ್ನು ತೆಗೆದುಕೊಂಡರು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಈಗ ಸಾಕ್ಷಿಗೆ 2 ಫೋಟೋಗಳನ್ನು ತೋರಿಸಿದ್ದು, ಅವುಗಳಲ್ಲಿ ಇರುವ ವಾಹನವನ್ನು ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಳ್ಳಲಾಯಿತು. ಸದರಿ ಫೋಟೋಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ 1 ಫೋಟೋವನ್ನು ತೋರಿಸಿದ್ದು, ಅದನ್ನು ಪಂಚನಾಮೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ. ಆರೋಪಿಯನ್ನು ಗುರುತಿಸುವಲ್ಲಿ ಆರೋಪಿಯ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವು ಮತ್ತು ಈ ಮೇಲೆ ಹೇಳಿರುವ 3 ಜನರು ಸ್ಯಾಂಟ್ರೊ ಕಾರ್ ಸಂ.

ಕೆಎ-01-ಎಂಸಿ-2909 ರಲ್ಲಿ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವುಗಳು ಹೊನ್ನಗನಹಟ್ಟಿ ವೃದ್ಧಾಶ್ರಮದ ಬಳಿ ಕಾರಿನಲ್ಲಿ ಹೋಗುತ್ತಿದ್ದಾಗ, ಬೆಂಗಳೂರು ಕಡೆಯಿಂದ ತಾವರೆಕೆರೆ ಕಡೆಗೆ ಬರುತ್ತಿದ್ದ ಹುಂಡೈ ವರ್ಣ ಕಾರಿನ ಸಂ. ಕೆಎ-04-ಎಂಎಂ-0611 ರ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಮ್ಮ ಕಾರಿಗೆ ಡಿಕ್ಕಿಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ದಿ.27-12-2023 ರಂದು ಬೆಳಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ನೀವು ತೋರಿಸಿದ ಜಾಗದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ , ಚಾಸಾ-4 ಮತ್ತು ಚಾಸಾ-5 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅಪಘಾತವು ನಡೆದು ಸುಮಾರು ಒಂದು ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀಮತಿ. ಎಸ್.ಹೆಚ್. ಎನ್, ವಕೀಲರಿಂದಃ-**

ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು ಸೂಕ್ತ ಕಾರಣ ನೀಡದೇ ಇರುವ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -694/2024**
**ಚಾಸಾ - 02 / ಪ್ರಾಸಾ - 02**

| | |
|---|---|
| ಹೆಸರು | **ಚೇತನ್** |
| ತಂದೆಯ ಹೆಸರು | **ಶಿವಣ್ಣ** |
| ವಯಸ್ಸು | **36** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 30-01-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಪ್ರಾಸಾ-1 ರವರು ನನ್ನ ಬಾವ ಮೈದುನಾ. ಚಾಸಾ-3 ರವರು ನನ್ನ ಹೆಂಡತಿ. ಶ್ರೇಯಸ್ ಗೋಕುಲ್ ರವರು ನನ್ನ ಮಗ. ದಿ.25-12-2023 ರಂದು ನಾನು, ಪ್ರಾಸಾ-1, ಚಾಸಾ-3 ಮತ್ತು ನನ್ನ ಮಗ ನನ್ನ ಸ್ಯಾಂಟ್ರೋ ಕಾರ್ ಸಂ. ಕೆಎ-01-ಎಂಸಿ-2909 ರಲ್ಲಿ ಸುಂಕದಕಟ್ಟೆಗೆ ಹೋಗುತ್ತಿದ್ದಾಗ, ಸುಂಕದ ಕಟ್ಟೆ ಮತ್ತು ತಾವರೆಕೆರೆ ಮಧ್ಯೆದಲ್ಲಿ ನಾವು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದಾಗ, ಎದುರುಗಡೆಯಿಂದ ಹುಂಡೈ ವರ್ಣ ಕಾರು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಡಿವೈಡರ್ ಗೆ ಡಿಕ್ಕಿಪಡಿಸಿ ನಂತರ ನಮ್ಮ ಕಾರಿಗೆ ಡಿಕ್ಕಿಪಡಿಸಿತು. ಸದರಿ ಅಪಘಾತದಿಂದ ನನ್ನ ಬಲಗಾಲು ಮತ್ತು ಸೊಂಟದ ಮೂಳೆ ಮುರಿದು ಹೋಗಿತ್ತು, ಕೈಕಾಲುಗಳಿಗೆ ತರಿಚಿದ ಗಾಯಗಳು ಆಗಿತ್ತು. ಪ್ರಾಸಾ-1 ಮತ್ತು ಚಾಸಾ-3 ರವರಿಗೆ ಸಣ್ಣ ಪುಟ್ಟ ಗಾಯಗಳು ಆಗಿತ್ತು. ನನ್ನ ಮಗನಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ಸದರಿ ಅಪಘಾತದಿಂದ ನನ್ನ ಕಾರು ಪೂರ್ತಿ ಜಖಂ ಗೊಂಡಿರುತ್ತದೆ.

ನಂತರ ಅಂಬುಲೆನ್ಸ್ ಕರೆ ಮಾಡಿ ಗೊರಗುಂಟೆ ಪಾಳ್ಯದಲ್ಲಿ ಇರುವ ಸ್ಪರ್ಶ ಆಸ್ಪತ್ರೆಗೆ ನನ್ನನ್ನು ಸೇರಿಸಿದರು. ನಾನು ಆರೋಪಿಯನ್ನು ನೋಡಿದರೆ

ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ. ಆರೋಪಿಯನ್ನು ಗುರುತಿಸುವಲ್ಲಿ ಆರೋಪಿಯ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ಈಗ ಸಾಕ್ಷಿಗೆ ನಿಪಿ-3 ಮತ್ತು 4 ನ್ನು ತೋರಿಸಿದ್ದು, ಅದರಲ್ಲಿ ಇರುವ ವಾಹನಗಳು ಅಪಘಾತಕ್ಕೆ ಒಳಗಾಗಿರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವುಗಳು ಹೊನ್ನಗನಹಟ್ಟಿ ವೃದ್ಧಾಶ್ರಮದ ಬಳಿ ಕಾರಿನಲ್ಲಿ ಹೋಗುತ್ತಿದ್ದಾಗ, ಬೆಂಗಳೂರು ಕಡೆಯಿಂದ ತಾವರೆಕೆರೆ ಕಡೆಗೆ ಬರುತ್ತಿದ್ದ ಹುಂಡೈ ವರ್ಣ ಕಾರಿನ ಸಂ.ಕೆಎ-04-ಎಂಎಂ-0611 ರ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಮ್ಮ ಕಾರಿಗೆ ಡಿಕ್ಕಿಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಪಘಾತ ಮಾಡಿದ ಚಾಲಕನ ಹೆಸರು ಅನೂಪ್ ಆಗಿರುತ್ತದೆ ಮತ್ತು ಅವರಿಗೂ ಸಹ ಸದರಿ ಅಪಘಾತದಿಂದ ಸಣ್ಣ ಪುಟ್ಟ ಗಾಯಗಳು ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅಪಘಾತವು ನಡೆದು ಸುಮಾರು ಒಂದು ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ-ಆರೋಪಿಯ ಪರ ಶ್ರೀಮತಿ. ಎಸ್.ಹೆಚ್.ಎನ್, ವಕೀಲರಿಂದಃ-**

ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು ಸೂಕ್ತ ಕಾರಣ ನೀಡದೇ ಇರುವ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -694/2024**
**ಚಾಸಾ - 03 / ಪ್ರಾಸಾ - 03**

| | |
|---|---|
| ಹೆಸರು | **ನಿಶಾಶ್ರೀ** |
| ಗಂಡನ ಹೆಸರು | **ಚೇತನ್** |
| ವಯಸ್ಸು | **28** |
| ಉದ್ಯೋಗ | **ಗೃಹಿಣಿ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 30-01-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಪ್ರಾಸಾ-1 ರವರು ನನ್ನ ತಮ್ಮ. ಪ್ರಾಸಾ-2 ರವರು ನನ್ನ ಯಜಮಾನರು . ಶ್ರೇಯಸ್ ಗೋಕುಲ್ ರವರು ನನ್ನ ಮಗ. ದಿ.25-12-2023 ರಂದು ನಾನು, ಪ್ರಾಸಾ-1, ಪ್ರಾಸಾ-2 ಮತ್ತು ನನ್ನ ಮಗ ಸ್ಯಾಂಟ್ರೊ ಕಾರ್ ನಲ್ಲಿ ಸಂಬಂಧಿಕರ ಮನೆಗೆ ಹೋಗಿ ವೈಯಕ್ತಿಕ ಕೆಲಸವನ್ನು ಮುಗಿಸಿಕೊಂಡು ತಾವರೆಕೆರೆಯಿಂದ ಸುಂಕದಕಟ್ಟೆಗೆ ಹೋಗುತ್ತಿದ್ದಾಗ, ರಾತ್ರಿ 10.30 ರಿಂದ 10.45 ರ ಸಮಯದಲ್ಲಿ ಹೊನ್ನಗನಹಟ್ಟಿ ಮದ್ದಾಶ್ರಮದ ಹತ್ತಿರ ನಮ್ಮ ಎದುರುಗಡೆಯಿಂದ ಬುರುತ್ತಿದ್ದ ಹುಂಡೈ ವರ್ಣ ಕಾರು ನಮ್ಮ ಕಾರಿನ ಮುಂಭಾಗಕ್ಕೆ ಡಿಕ್ಕಿಪಡಿಸಿತ್ತು. ಕಾರನ್ನು ಚಾಲನೆ ಮಾಡುತ್ತಿದ್ದ ನನ್ನ ಯಜಮಾನರಿಗೆ ತನ್ನ ಬಲತೊಡೆಯ ಬಲಭಾಗಕ್ಕೆ ಏಟಾಗಿರುತ್ತದೆ. ನನನಗೆ ಮತ್ತು ಪ್ರಾಸಾ-1 ರವರಿಗೆ ಸಣ್ಣ ಪುಟ್ಟ ಗಾಯಗಳು ಆಗಿತ್ತು. ನನ್ನ ಮಗನಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ.

ನಂತರ ಅಂಬುಲೆನ್ಸ್ ನಲ್ಲಿ ನನ್ನ ಯಜಮಾನರನ್ನು ಯಶವಂತಪುರದಲ್ಲಿ ಇರುವ ಸ್ಪರ್ಶ ಆಸ್ಪತ್ರೆಗೆ ಸೇರಿಸಿದೆವು. ನಾನು ಆರೋಪಿಯನ್ನು ನೋಡಿದರೆ

ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿರುವುದಿಲ್ಲ. ಆರೋಪಿಯನ್ನು ಗುರುತಿಸುವಲ್ಲಿ ಆರೋಪಿಯ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ಈಗ ಸಾಕ್ಷಿಗೆ ನಿಪಿ-3 ಮತ್ತು 4 ನ್ನು ತೋರಿಸಿದ್ದು, ಅದರಲ್ಲಿ ಇರುವ ವಾಹನವು ಅಪಘಾತಕ್ಕೆ ಒಳಗಾಗಿರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನೀವುಗಳು ಸ್ಯಾಂಟ್ರೋ ಕಾರಿನ ಸಂ. ಕೆಎ-01-ಎಂಸಿ-2909 ರಲ್ಲಿ ಹೋಗಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವುಗಳು ಹೊನ್ನಗನಹಟ್ಟಿ ವೃದ್ದಾಶ್ರಮದ ಬಳಿ ಕಾರಿನಲ್ಲಿ ಹೋಗುತ್ತಿದ್ದಾಗ, ಬೆಂಗಳೂರು ಕಡೆಯಿಂದ ತಾವರೆಕೆರೆ ಕಡೆಗೆ ಬರುತ್ತಿದ್ದ ಹುಂಡೈ ವರ್ಣ ಕಾರಿನ ಸಂ.ಕೆಎ-04-ಎಂಎಂ-0611 ರ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ತನ್ನ ಬಲಭಾಗದ ರಸ್ತೆಯ ಡಿವೈಡರ್ ಗೆ ಡಿಕ್ಕಿ ಹೊಡೆದು ನಂತರ ನಿಮ್ಮ ಕಾರಿಗೆ ಡಿಕ್ಕಿಪಡಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅಪಘಾತದಿಂದ ಪ್ರಾಸಾ-2 ರವರ ಬಲತೊಡೆಗೆ, ಸೊಂಟಕ್ಕೆ ಹಾಗೂ ಕೈ ಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳು ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಪಘಾತ ಮಾಡಿದ ಚಾಲಕನ ಹೆಸರು ಅನೂಪ್ ಆಗಿರುತ್ತದೆ ಮತ್ತು ಅವರಿಗೂ ಸಹ ಸದರಿ ಅಪಘಾತದಿಂದ ಸಣ್ಣ ಪುಟ್ಟ ಗಾಯಗಳು ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ

ಅಪಘಾತವು ನಡೆದು ಸುಮಾರು ಒಂದು ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ-ಆರೋಪಿಯ ಪರ ಶ್ರೀಮತಿ.ಎಸ್.ಹೆಚ್.ಎನ್, ವಕೀಲರಿಂದಃ-**

ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು ಸೂಕ್ತ ಕಾರಣ ನೀಡದೇ ಇರುವ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -694/2024**
**ಚಾಸಾ - 04 / ಪ್ರಾಸಾ - 04**

| | |
|---|---|
| ಹೆಸರು | **ಬೋರೇಗೌಡ** |
| ತಂದೆಯ ಹೆಸರು | **ಗಂಗಯ್ಯ** |
| ವಯಸ್ಸು | **35** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಕುಣಿಗಲ್** |

**ದಿನಾಂಕಃ 30-01-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ನೋಟಿಸ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ನೋಟಿಸನ್ನು ನಿಪಿ-6 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ.ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

2023 ನೇ ಇಸವಿಯ ಡಿಸೆಂಬರ್ ತಿಂಗಳಿನಲ್ಲಿ ಹೊನ್ನಗನಟ್ಟಿಯ ಬಳಿ ಅಪಘಾತದ ವಿಷಯಕ್ಕೆ ಸಂಬಂಧಿಸಿದಂತೆ ನಾನು ನಿಪಿ-2 ಕ್ಕೆ ನನ್ನ ಸಹಿಯನ್ನು ಮಾಡಿದ್ದೇನೆ . ಆ ಸಮಯದಲ್ಲಿ ಪಂಚನಾಮೆಯನ್ನು ಮಾಡಿ ಫೋಟೋವನ್ನು ತೆಗೆದುಕೊಂಡರು. ಈಗ ಸಾಕ್ಷಿಗೆ ನಿಪಿ-5 ತೋರಿಸಿದ್ದು, ಅದನ್ನು ಪಂಚನಾಮೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ**

**ಮಹಿತಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.27-12-2023 ರಂದು ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲೀಸರು ನಿಮಗೆ ಮತ್ತು ಚಾಸಾ-5 ರವರಿಗೆ ನಿಪಿ-6 ರಂತೆ ನೋಟಿಸ್ ನ್ನು ನೀಡಿದರು ಎಂದರೆ ಸಾಕ್ಷಿಯು ಮೌಖಿಕವಾಗಿ ತಿಳಿಸಿದರು ಎನ್ನುತ್ತಾರೆ. ಅದೇ ದಿನದಂದು ಬೆಳಗ್ಗೆ 9 ರಿಂದ 10 ಗಂಟೆ ಸಮಯದಲ್ಲಿ ಪ್ರಾಸಾ-1 ರವರು ತೋರಿಸಿದ ಜಾಗದಲ್ಲಿ ನಿಪಿ-2 ರಂತೆ ಪೋಲೀಸರು ಪಂಚನಾಮೆಯನ್ನು ಮಾಡಿ ನಿಮ್ಮ, ಪ್ರಾಸಾ-1 ಮತ್ತು ಚಾಸಾ-5 ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಸ್ಯಾಂಟ್ರೊ ಕಾರ್ ಸಂ. ಕೆಎ-01-ಎಂಸಿ-2909 ಮತ್ತು ಹುಂಡೈ ವರ್ಣ ಕಾರ್ ಸಂ.ಕೆಎ-04-ಎಂಎಂ-0611 ಕಾರನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅಪಘಾತವು ನಡೆದು ಸುಮಾರು ಒಂದು ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲು:- ಆರೋಪಿಯ ಪರ ಶ್ರೀಮತಿ. ಎಸ್.ಹೆಚ್. ಎನ್, ವಕೀಲರಿಂದ:-**

ಆರೋಪಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು ಸೂಕ್ತ ಕಾರಣ ನೀಡದೇ ಇರುವ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | ವ್ಯವಸಾಯ |
| ವಿಳಾಸ | |

ದಿನಾಂಕಃ **07-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಪಾಟೀ ಸವಾಲು - ಆರೋಪಿ ಪರ ಶ್ರೀ.** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**